೧೦-೦೦ ಎ.ಎಂ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡುತ್ತಾರೆ ?

ಅಧ್ಯಕ್ಷರು —ನಿಯಮದ ಪ್ರಕಾರ ತಾವು ಆ ರೀತಿ ಕೇಳುವಂತಿಲ್ಲ. ಸರ್ಕಾರದವರು ತಮಗೆ ಉತ್ತರ ಕಳುಹಿಸಿಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ. ಎ. ಲಕ್ಷ್ಮೀಸಾಗರ್ —ಆದಷ್ಟು ಜಾಗ್ರತೆ ಉತ್ತರ ಕೊಡುತ್ತೇವೆ.

೭. ಹುಬ್ಬಳ್ಳಿಯ ವಿಜಯನಗರ ಶಿಕ್ಷಣ ಮಹಾ ವಿದ್ಯಾಲಯಕ್ಕೆ ಮಾನ್ಯತೆ ನೀಡುವ ಬಗ್ಗೆ

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಸಾರ್ವಜನಿಕ ಪ್ರಾಮುಖ್ಯತೆ ಪಡೆದ ತುರ್ತು ವಿಷಯದ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯಬಯಸುತ್ತೇನೆ.

ಕರ್ನಾಟಕದಲ್ಲಿ ಶಾಲಾಕಾಲೇಜುಗಳ ಮಾನ್ಯತೆ ಅಥವಾ ಅಮಾನ್ಯತೆಯ ಬಗ್ಗೆ ಪರೀಕ್ಷಾ ಹಣ ಕಟ್ಟಲಿರುವ ವೇಳೆಯಲ್ಲಿ ಗೊತ್ತಾಗುತ್ತದೆ. ನೂರಾರು ವಿದ್ಯಾರ್ಥಿಗಳು ಶಾಲೆ ಶುಲ್ಕ ಕೊಟ್ಟು ವರ್ಷ ಪೂರ್ತಿ ವಿದ್ಯಾಭ್ಯಾಸ ಮಾಡಿ ಪರೀಕ್ಷೆಯ ಸಮಯದಲ್ಲಿ ವಿಶ್ವವಿದ್ಯಾನಿಲಯ ಅಥವಾ ಇಲಾಖೆಯ ಮಾನ್ಯತೆ ಇಲ್ಲವೆಂದು ಪರೀಕ್ಷೆಗೆ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ. ಮೊದಲೇ ಈ ಬಗ್ಗೆ ವಿದ್ಯಾರ್ಥಿಗಳಿಗೆ ಸೂಚನೆ ಕೊಡುವುದಿಲ್ಲ.

ಧಾರವಾಡ ಜಿಲ್ಲಾ ಹುಬ್ಬಳ್ಳಿಯ ವಿಜಯನಗರ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ವಿದ್ಯಾಭ್ಯಾಸಕ್ಕೆ ೧೯೮೬-೮೭ರ ಶೈಕ್ಷಣಿಕ ವರ್ಷದಲ್ಲಿ ಒಟ್ಟು ೮೪ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿತ್ತು. ಈ ಕಾಲೇಜು ಕರ್ನಾಟಕ ವಿಶ್ವವಿದ್ಯಾನಿಲಯದ ಪತ್ರ ಕ್ರಮಕ್ಕನುಗುಣವಾಗಿ ಪಾಠಗಳನ್ನು ನಡೆಸಿದೆ. ವಿದ್ಯಾರ್ಥಿಗಳು ಶಿಕ್ಷಣದ ಶುಲ್ಕ ಕಟ್ಟಿ ಒಂದು ವರ್ಷ ವಿದ್ಯಾಭ್ಯಾಸ ಮಾಡಿದ್ದಾರೆ. ಈ ಕಾಲೇಜಿಗೆ ಕರ್ನಾಟಕ ವಿಶ್ವವಿದ್ಯಾನಿಲಯ ಮಾನ್ಯತೆ ನೀಡಿಲ್ಲವೆಂದು ಈ ಮೇಲ್ಕಂಡ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಕಟ್ಟಿಸಿಕೊಂಡಿರುವುದಿಲ್ಲ. ಇಡೀ ವರ್ಷ ಈ ಕಾಲೇಜಿನ ಮಾನ್ಯತೆ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಒಮ್ಮೆಯೂ ವಿಶ್ವವಿದ್ಯಾನಿಲಯದವರಾಗಲಿ ಗಮನಕ್ಕೆ ತರದಿರುವುದು ತುಂಬಾ ಆಶ್ಚರ್ಯವಾಗಿದೆ,

ಈ ಮೇಲ್ಕಂಡ ಬಿ.ಇಡಿ ಪರೀಕ್ಷೆಯನ್ನು ಕರ್ನಾಟಕ ವಿಶ್ವವಿದ್ಯಾನಿಲಯ ಏಪ್ರಿಲ್ ೮, ೧೯೮೭ ರಂದು ಆರಂಭ ಮಾಡಲಿದೆ. ಆದರೆ ಈ ವಿಜಯನಗರ ಶಿಕ್ಷಣ ಮಹಾ ವಿದ್ಯಾಲಯ ಬಿ.ಇಡಿ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಪರೀಕ್ಷಾ ಶುಲ್ಕ ಕಟ್ಟಿಸಿಕೊಂಡಿರುವುದಿಲ್ಲ. ಈ ಕಾಲೇಜಿನಲ್ಲಿ ಇಡೀ ವರ್ಷ ವ್ಯಾಸಂಗ ಮಾಡಿ ಈಗ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡದಿದ್ದರೆ ಈ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಈ ಕಾಲೇಜಿನ ಮಾನ್ಯತೆ ಏನಾದವನ್ನು ಸರ್ಕಾರ ಕೂಡಲೇ ಬಗೆಹರಿಸಿ ಏಪ್ರಿಲ್ ೮ ೧೯೮೭ರಂದು ಈ ಮೇಲ್ಕಂಡ ೮೪ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಹಾಯ ಮಾಡಲು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ವಿವರಗಳು ನನಗೆ ಗೊತ್ತಿಲ್ಲ. ಆದರೂ ಈ ಬಗ್ಗೆ ತಕ್ಷಣವೇ ಕ್ರಮ ಕೈಕೊಳ್ಳಬೇಕೆಂದು ನಾನು ವಿದ್ಯಾಮಂತ್ರಿಗಳಿಗೆ ಹೇಳುತ್ತೇನೆ.

೮. ತರೀಕೆರೆ ತಾಲ್ಲೂಕಿನ ವಿಜ್ಞಾನ ಇಂಡಸ್ಟ್ರೀಸ್‌ನವರು ೧೪-೩-೧೯೮೭ರಂದು ಲಾಕೌಟನ್ನು ಜಾರಿಗೆ ತಂದಿರುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಬಿ.ಇ.ಎಂ.ಎಲ್. ಅಧೀನ ಸಂಸ್ಥೆಯಲ್ಲಿರುವ ತರೀಕೆರೆ ತಾಲ್ಲೂಕಿನ ವಿಜ್ಞಾನ ಇಂಡಸ್ಟ್ರೀಸ್ ಕಾರ್ಖಾನೆಯು ೧೪-೩-೧೯೮೭ರಂದು ಲಾಕೌಟ್ ಜಾರಿಗೆ ತಂದಿರುವ ಕಣ್ಣುಮುಚ್ಚಾಲೆ ನಾಟಕವು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಸರ್ಕಾರದವರು ಇದರ ಬಗ್ಗೆ ಯಾವ ನಿಲುವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸುವರೇ ? ಬಿ.ಇ ಎಂ.ಎಲ್. ನೌಕರರು ಮತ್ತು ವಿಜ್ಞಾನ ಇಂಡಸ್ಟ್ರೀಸ್ ನೌಕರರು ಎಂಬ ತಾರತಮ್ಯವಿದ್ದು ಅದನ್ನು ಬಗೆಹರಿಸುವಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ಒಂದು ನ್ಯಾಯಯುತವಾದ ಬೇಡಿಕೆಯನ್ನು ಆಡಳಿತ ವರ್ಗದ ಮುಂದೆ ಇಟ್ಟಾಗ ನೌಕರರ ವರ್ಗದವರನ್ನು ಅಮಾನತ್ತಿನಲ್ಲಿಡುವುದು ಅವರಿಗೆ ಬೆದರಿಕೆ ಕೊಡುವುದು ಸರ್ವೇ ಸಾಮಾನ್ಯವಾಗಿ ನಿರಂತರವಾಗಿ ಬೆಳೆದು ಬಂದ ದಾರಿಯಾಗಿದೆ. ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡುವಲ್ಲಿ ಸರ್ಕಾರದವರ ಗಮನವನ್ನು ಸೆಳೆಯಲು ಅನೇಕ ಸಾರಿ ಪ್ರಯತ್ನಿಸಿದರೂ ಸಹ ಇದರ ಬಗ್ಗೆ ಯಾವ ಪರಿಹಾರವೂ ದೊರಕಿಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಕಾರ್ಮಿಕ ಸಚಿವರ ಗಮನಕ್ಕೆ ತಂದು, ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ವಿಜ್ಞಾನ್ ಇಂಡಸ್ಟ್ರೀಸ್‌ನ್ನು ಈ ಹಿಂದೆಯೇ ರಾಜ್ಯ ಸರ್ಕಾರದ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಪ್ರಕಾರ ತೆಗೆದುಕೊಂಡು ಬಿ.ಇ.ಎಂ ಎಲ್. ಸಂಸ್ಥೆಗೆ ಪಹಿಸಿಕೊಟ್ಟಿದ್ದೇವೆ. ಆದ್ದರಿಂದ ಇದರ ಉಸ್ತುವಾರಿ ಬಿ.ಇ.ಎಂ ಎಲ್. ಸಂಸ್ಥೆಗೆ ಸೇರಿದ್ದಾಗಿದೆ. ಈಗ ರಾಜ್ಯ ಸರ್ಕಾರಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಸಹ ಅಲ್ಲಿನ ವ್ಯವಸ್ಥಾಪಕರಿಗೆ ಆದಷ್ಟು ಬೇಗ ಅಲ್ಲಿನ ಕಾರ್ಮಿಕರಿಗೆ ಸಂಬಳ ಕೊಡಬೇಕೆಂದು ಆದೇಶ ಕೊಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—(ಸದಸ್ಯರು ಹಾಜರಿಲ್ಲ).

ಶ್ರೀ ಪ್ರತಾಪಚಂದ್ರಶೆಟ್ಟಿ.—(ಸದಸ್ಯರು ಹಾಜರಿಲ್ಲ).

೯. ಬೆಂಗಳೂರು ನಗರದ ಮಂರ್ಫಿಟೌನಿನ ನಾಲಾ ರೋಡಿನಲ್ಲಿ ೯ ಗುಡಿಸಲುಗಳು ಸುಟ್ಟು ಹೋಗಿರುವುದು.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೯-೩-೧೯೮೭ರಂದು ರಾತ್ರಿ ೧೧-೩೦ ಗಂಟೆಯಲ್ಲಿ ನಗರದ ಮಂರ್ಫಿಟೌನಿನ ನಾಲಾ ರೋಡಿನಲ್ಲಿ ೯ ಗುಡಿಸಲುಗಳು ಬೆಂಕಿ ಅನಾಹುತಕ್ಕೆ ಈಡಾಗಿ ಸುಟ್ಟು ಹೋಗಿದ್ದು ಅವರ ಆಸ್ತಿಪಾಸ್ತಿಗೂ ಪೂರ್ಣವಾಗಿ ನಷ್ಟ ಸಂಭವಿಸಿದೆ. ಅಲ್ಲದೆ ಅವರು ನಿರ್ವಸಿತರೂ, ನಿರ್ಗತಿಕರೂ ಆಗಿದ್ದಾರೆ. ಸದರಿ ನಿರ್ವಸಿತರಿಗೆ ಅವರಿಗುಂಟಾಗಿರುವ ನಷ್ಟದ ಬಗ್ಗೆ ಪೂರ್ಣ ಪರಿಹಾರ ದೊರಕಿಸಿ ಕೊಡುವುದಲ್ಲದೆ ತಕ್ಷಣ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರವನ್ನೊದಗಿಸುವಂತೆ ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್. ಇದರ ಬಗ್ಗೆ ವಿಚಾರಣೆ ಮಾಡಿ ಮುಂದಿನ ಕ್ರಮ ಕೈಕೊಳ್ಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ವಿವರಗಳನ್ನು ಕೊಟ್ಟರೆ ನನಗೆ ವಿಚಾರಣೆ ಮಾಡಲು ಅನುಕೂಲವಾಗುತ್ತದೆ,

೧೦ ಉಡುಪಿಯ ಬಸ್‌ನಿಲ್ದಾಣದ ಹೋಟೆಲಿನ ಕೊಳಕು ನೀರಿನ ದುರ್ವಾಸನೆಯಿಂದ ಪರಿಸರಮಾಲಿನ್ಯವಾಗುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೆ, ಉಡುಪಿ ಪುರಸಭೆ ಮಂಗಳೂರು ವಿಭಾಗದ ಪುರಸಭೆಗಳ ಪೈಕಿ ಅತ್ಯುತ್ತಮ ಪುರಸಭೆ ಎಂದು ಪ್ರಶಸ್ತಿಗಳಿಸಿದೆ. ಆದರೆ ಈ ಪ್ರಶಸ್ತಿಗೆ ಕಳಂಕವೋ ಎನ್ನುವಂತೆ ಉಡುಪಿಯ ಬಸ್ ನಿಲ್ದಾಣದ ಹೋಟೆಲಿನಿಂದ ಹೊರಡುವ ದುರ್ವಾಸನೆಯ ನೀರು ಸಾರ್ವಜನಿಕ ಮೂತ್ರಿಯಿಂದ ಹೊರಡುವ ಮೂತ್ರದೊಂದಿಗೆ ಚರಂಡಿಗೆ ಸೇರಿ ಮೂಡನಿಡಂಬೂರಿನವರೆಗೆ ಹರಿದು ಅಲ್ಲಿ ನಿಂತು ಕೊಳಕು ದ್ರವವಾಗಿ ಬಹಳ ದುರ್ವಾಸನೆಯಿಂದ ಕೂಡಿ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಅಲ್ಲದೆ ಆ ಚರಂಡಿಯ ಅಕ್ಕ ಪಕ್ಕದ ಬಾವಿಗಳ ನೀರೂ ಸಹ ಇದರಿಂದ ಕಲುಷಿತವಾಗಿದ್ದು ಗಂಡಾಂತರ ತರುವಂತಹದ್ದಾಗಿದೆ. ಈ ಬಗ್ಗೆ ಪುರಸಭೆಯವರಿಗೆ ಹಲವಾರು ದೂರುಗಳು ಬಂದಿದ್ದು ಪುರಸಭೆಯವರು ಇದನ್ನು ಗಂಭೀರವಾಗಿ ಪರಿಗಣಿಸದೆ ಸೂಕ್ತ ಕ್ರಮ ಕೈಕೊಳ್ಳದೆ ಪೊಳ್ಳು ಆಶ್ವಾಸನೆಗಳನ್ನು ನೀಡಿ ಕಾಲ